ಶ್ರೀ ಆರ್.ವಿ. ದೇಶಪಾಂಡೆ:- ಇದಕ್ಕೆ ಉತ್ತರವನ್ನು ಕೇಂದ್ರ ಸರ್ಕಾರ ಕೊಡಬೇಕಾಗುತ್ತದೆ. ತಾವು ಗ್ಲೋಬಲೈಸೇಷನ್ ಬಗ್ಗೆ ಕೇಳಿದ್ದೀರಿ. ಗ್ಲೋಬಲೈಸೇಷನ್, ಪ್ರೈವೇಟೈಸೇಷನ್ ಹಾಗೂ ಲೆಬರಲೈಸೇಷನ್ ಇವುರ 1993ರಲ್ಲಿ ಪ್ರಾರಂಭವಾಗಿದೆ. ಆಗ ನಾವು ಅಧಿಕಾರದಲ್ಲಿ ಇದ್ದೆವು Successive government in the centre have supported this. ಯಾವ ಸರ್ಕಾರವು ಬಂದ್ ಮಾಡುವುದಕ್ಕೆ ಹೋಗಿಲ್ಲ. ಹಾಗಾಗಿ ಇವತ್ತು 21ನೇ ಶತಮಾನದಲ್ಲಿ ಕಾಂಪಿಟೇಷನ್ ನಿಂದ, ಕ್ವಾಲಿಟಿಯಿಂದ ಪರಿಣಾಮಗಳು ಆಗಿದ್ದಾನೆ. 21ನೇ ಶತಮಾನ ಗ್ರಾಹಕರ ಶತಮಾನ ಗ್ರಾಹಕರಿಗೆ ಯಾವುದೇ ವಸ್ತು ಬೇಕಾದರೂ ಚೀಪೆಸ್ಟ್ ಆಗಿ ಸಿಗಬೇಕು. Those who have got quality and who are cost-effective will succeed ಹಾಗಾಗಿ ಏನು ಮಲ್ಟಿನ್ಯಾಷನಲ್ ಕಂಪನಿಗಳು ಬರುತ್ತವೆ ಅಥವಾ ಫಾರಿನ್ ಇನ್‌ವೆಸ್ಟ್‌ಮೆಂಟ್ಸ್ ಬರುತ್ತವೆ ಅದರ ನೀತಿಯನ್ನು ಕೇಂದ್ರ ಸರ್ಕಾರ ನಿರೂಪಣೆ ಮಾಡುತ್ತದೆ. ಆದುದರಿಂದ ತಮಗೆ ಯಾವ ಸಮಸ್ಯೆಯಾಗಿದ್ದರೂ ಕೂಡ ತಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು.

## ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಎಸ್‌ಸಿ: ಎಸ್‌ಟಿ ಆರರಿಗೆ ಒದಗಿಸಿರುವ ಕೊಳವೆ ಬಾವಿ ಹಾಗೂ ಹಾಸ್ಟೇಲ್ ಸೌಲಭ್ಯಗಳು

33(508):- ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2000-01ರಲ್ಲಿ ಪ್ರಾರಂಭಿಸಿರುವ ಹಾಸ್ಟೆಲ್ ಕಟ್ಟಡಗಳ ಸಂಖ್ಯೆ ಎಷ್ಟು? ಮೆಟ್ರಿಕ್ ನಂತರ ಮೆಟ್ರಿಕ್ ಪೂರ್ವ ವಸತಿ ನಿಲಯ ಜಿಲ್ಲಾವಾರು ವಿವರ ನೀಡುವುದು?

ಆ. ಕಟ್ಟಡ ಒದಗಿಸಿದ್ದಲ್ಲಿ ಯಾವ ಮೂಲಕ ಹಣಕಾಸಿನ ನೆರವನ್ನು ಪಡೆಯಲಾಗಿದೆ ಮತ್ತು ಕಟ್ಟಡ ನಿರ್ಮಾಣದ ಕೆಲಸವನ್ನು ಯಾವ ಏಜೆನ್ಸಿ ವಹಿಸಿಕೊಡಲಾಗಿದೆ?

ಇ. ಆ ಸಂಸ್ಥೆಗೆ ಕಾಲಮಿತಿ ನೀಡಲಾಗಿದೆಯೇ? ಹೌದು

ಈ. 2002-03ರಲ್ಲಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಎಸ್‌ಸಿ:ಎಸ್‌ಟಿ ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆಯೇ?

ಎ. ಶೈಕ್ಷಣಿಕವಾಗಿ ಹಿಂದುಳಿದ ಕೊಪ್ಪಳವನ್ನು ಒಳಗೊಂಡ ಏಳು ಜಿಲ್ಲೆಗಳಲ್ಲಿ ಹೊಸದಾಗಿ ಎಷ್ಟು ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ?

ಊ. ಪ್ರಾರಂಭಿಸದಿದ್ದರೆ ಹಿಂದುಳಿದ ಜಿಲ್ಲೆಗಳು ಶೈಕ್ಷಣಿಕವಾಗಿ ಮುಂದುವರೆಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎ. ಕೃಷ್ಣಪ್ಪ:- (ಸಮಾಜ ಕಲ್ಯಾಣ ಸಚಿವರು)

2000-01ರಲ್ಲಿ ಪ್ರಾರಂಭಿಸಿರುವ ಹಾಸ್ಟೆಲ್ ಕಟ್ಟಡಗಳ ಸಂಖ್ಯೆ-180 ಇಲಾಖಾವಾರು ಹಾಸ್ಟೆಲ್ ಕಟ್ಟಡಗಳ ವಿವರಗಳು ಈ ಕೆಳಗಿನಂತಿವೆ.

1. ಸಮಾಜ ಕಲ್ಯಾಣ ಇಲಾಖೆ : 127

| | | | |
|---|---|---|---|
| 2. | ಹಿಂದುಳಿದ ವರ್ಗಗಳ ಇಲಾಖೆ | : | 39 |
| 3. | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | : | 14 |
| 4. | ಅಲ್ಪಸಂಖ್ಯಾತರ ಇಲಾಖೆ | : | ಇಲ್ಲ |
| | | ಒಟ್ಟು: | 180 |

ಜಿಲ್ಲಾವಾರು ಹಾಗೂ ಇಲಾಖಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ. ರಾಜ್ಯ ವಲಯದ ಆಯವ್ಯಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ ಪಡೆಯಲಾಗಿದೆ. ಈ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಕರ್ನಾಟಕ ಭೂಸೇನಾ ನಿಗಮ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಮತ್ತು ಲೋಕೋಪಯೋಗಿ ಇಲಾಖೆ ಇವರಿಂದ ಕೈಗೊಳ್ಳಲಾಗಿದೆ.

ಇ. ಹೌದು

ಈ. ಇಲ್ಲ

ಎ. ಕೊಪ್ಪಳವನ್ನು ಒಳಗೊಂಡು ಏಳು ಜಿಲ್ಲೆಗಳಲ್ಲಿ ಹೊಸದಾಗಿ ಪ್ರಾರಂಭಿಸಿರುವ ವಸತಿ ನಿಲಯಗಳ ಇಲಾಖಾವಾರು ವಿವರ ಈ ಕೆಳಗಿನಂತಿದೆ.

| | | | |
|---|---|---|---|
| 1. | ಸಮಾಜ ಕಲ್ಯಾಣ ಇಲಾಖೆ | : | 16 |
| 2. | ಹಿಂದುಳಿದ ವರ್ಗಗಳ ಇಲಾಖೆ | : | 13 |
| 3. | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | : | 19 |
| 4. | ಅಲ್ಪಸಂಖ್ಯಾತರ ಇಲಾಖೆ | : | - |
| | | ಒಟ್ಟು: | 48 |

ಊ. ಉದ್ಭವಿಸುವುದಿಲ್ಲ.

ಅನುಬಂಧ

ಸಮಾಜ ಕಲ್ಯಾಣ ಇಲಾಖೆ

| ಕ್ರ.ಸಂ. | ಜಿಲ್ಲೆ | ಮೆ. ಪೂರ್ವ ವಿ. ನಿಲಯ | ಮೆ.ನಂತರದ ವಿ. ನಿಲಯಗಳು | ಒಟ್ಟು |
|---|---|---|---|---|
| 1. | ಬೆಂಗಳೂರು (ಗ್ರಾ) | 8 | 1 | 9 |
| 2. | ಕೋಲಾರ | 25 | 1 | 26 |
| 3. | ತುಮಕೂರು | 5 | - | 5 |
| 4. | ಚಿತ್ರದುರ್ಗ | 4 | 4 | 8 |

| 1 | | 2 | 3 | 4 |
|---|---|---|---|---|
| 5. | ಶಿವಮೊಗ್ಗ | 7 | - | 7 |
| 6. | ದಾವಣಗೆರೆ | 5 | 1 | 6 |
| 7. | ಮಂಡ್ಯ | 4 | 1 | 5 |
| 8. | ಮೈಸೂರು | 5 | - | 5 |
| 9. | ಚಾಮರಾಜನಗರ | 2 | 1 | 3 |
| 10. | ಹಾಸನ | 4 | 1 | 4 |
| 11. | ಚಿಕ್ಕಮಗಳೂರು | 3 | 1 | 4 |
| 12. | ರಾಯಚೂರು | 3 | 1 | 4 |
| 13. | ಕೊಪ್ಪಳ | 4 | - | 4 |
| 14. | ಗುಲ್ಬರ್ಗಾ | 7 | 2 | 9 |
| 15. | ಧಾರವಾಡ | 1 | 2 | 3 |
| 16. | ಗದಗ | 3 | - | 3 |
| 17. | ಹಾವೇರಿ | 2 | 1 | 3 |
| 18. | ಬೆಳಗಾಂ | 3 | - | 3 |
| 19. | ಬಿಜಾಪುರ | 9 | - | 9 |
| 20. | ಬಾಗಲಕೋಟೆ | 5 | - | 5 |
| 21. | ಬೀದರ್ | 2 | - | 2 |
| | ಒಟ್ಟು: | 110 | 17 | 127 |
| | ಹಿಂದಳಿದ ವರ್ಗಗಳ ಇಲಾಖೆ | | | |
| 1. | ಬೆಂಗಳೂರುನಗರ ಜಿಲ್ಲೆ | - | 2 | 2 |
| 2. | ಬೆಂಗಳೂರು (ಗ್ರಾ) ಜಿಲ್ಲೆ | 1 | - | 1 |
| 3. | ಬಳ್ಳಾರಿ | 1 | - | -1 |
| 4. | ಚಿಕ್ಕಮಗಳೂರು | 2 | 1 | 3 |
| 5. | ದಕ್ಷಿಣ ಕನ್ನಡ | - | 2 | 2 |
| 6. | ಧಾರವಾಡ | - | 1 | 1 |

| | 1 | 2 | 3 | 4 |
|---|---|---|---|---|
| 7. | ದಾವಣಗೆರೆ | 2 | 1 | 3 |
| 8. | ಹಾಸನ | 2 | 2 | 1 |
| 9. | ಹಾವೇರಿ | 1 | - | 1 |
| 10. | ಕೋಲಾರ | 3 | | 3 |
| 11. | ಕೊಪ್ಪಳ | - | 2 | 2 |
| 12. | ಮಂಡ್ಯ | 2 | - | 2 |
| 13. | ಮೈಸೂರು | 2 | 1 | 3 |
| 14. | ರಾಯಚೂರು | - | 1 | 1 |
| 15. | ಶಿವಮೊಗ್ಗ | 3 | 3 | 6 |
| 16. | ತುಮಕೂರು | - | 1 | 1 |
| 17. | ಉತ್ತರ ಕನ್ನಡ | 1 | - | 1 |
| | | | | 39 |

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

| | | | | |
|---|---|---|---|---|
| 1. | ಹಾವೇರಿ | 2 | - | 2 |
| 2. | ಚಿಕ್ಕಮಗಳೂರು | 2 | - | 2 |
| 3. | ಗುಲ್ಬರ್ಗಾ | 1 | - | 1 |
| 4. | ದಾವಣಗೆರೆ | 2 | - | 2 |
| 5. | ಬಳ್ಳಾರಿ | 1 | - | 1 |
| 6. | ತುಮಕೂರು | 2 | - | 2 |
| 7. | ಕೊಪ್ಪಳ | 1 | - | 1 |
| 8. | ಬೆಳಗಾಂ | 2 | - | 2 |
| 9. | ಮೈಸೂರು | 1 | - | 1 |
| | | | | 14 |

ಎಂ. ಪ್ರಾಣದೇವ

ಸರ್ಕಾರ ಅಧೀನ ಕಾರ್ಯದರ್ಶಿ

ಸಮಾಜ ಕಲ್ಯಾಣ ಇಲಾಖೆ

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವನ್ನು ಮಾನ್ಯ ಮಂತ್ರಿಯವರು ಸವಿಸ್ತಾರವಾಗಿ ಕೊಟ್ಟಿದ್ದಾರೆ. ಆದರೆ ಅವರು ನನ್ನ ಮೂಲ ಪ್ರಶ್ನೆಯನ್ನು ಕೈಬಿಟ್ಟಿದ್ದಾರೆ ಎಂದು ನನಗೆ ಅನಿಸುತ್ತದೆ. 2001-02ನೇ ಸಾಲಿನಲ್ಲಿ ಎಷ್ಟು ಹಾಸ್ಟೆಲ್ ಕಟ್ಟಡಗಳನ್ನು ರಾಜ್ಯದಲ್ಲಿ ತೆಗೆದುಕೊಂಡಿದ್ದಾರೆ ಮತ್ತು ಅದನ್ನು ಯಾವ ಕಂಪನಿಗೆ ಗುತ್ತಿಗೆಗೆ ವಹಿಸಿದ್ದಾರೆ ಎಂದು ಕೇಳಿದ್ದೇನೆ. ಅದಕ್ಕೆ ತಾವು ಉತ್ತರ ಕೊಡುತ್ತೀರಿ ಎಂದು ಭಾವಿಸುತ್ತೇನೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಅವರ ಪ್ರಶ್ನೆ, 2000-2001ನೇ ಸಾಲಿನಲ್ಲಿ ಪ್ರಾರಂಭಿಸುವ ಹಾಸ್ಟೆಲ್ ಕಟ್ಟಡಗಳ ಸಂಖ್ಯೆ ಎಷ್ಟು? ಮೆಟ್ರಿಕ್ ನಂತರ, ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಜಿಲ್ಲಾವಾರು ವಿವರ ನೀಡಬೇಕೆಂದು ಕೇಳಿದಾರೆ, ಅದನ್ನು ನಾವು ಕೊಟ್ಟಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: 2001-2002ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಹಾಸ್ಟೆಲ್ ಕಟ್ಟಡಗಳನ್ನು ತೆಗೆದುಕೊಂಡಿದ್ದೀರಿ ಮತ್ತು ಅದನ್ನು ಮೆಕಾನ್ ಕಂಪನಿಗೆ ಕೊಟ್ಟಿದ್ದೀರಿ ಹಾಗೂ ಅದಕ್ಕೆ ಟಂಡರ್ ಎಸ್‌ಆರ್ ಲೇಟ್ ಏನಿದೆ ಅದು ಅಬೌವ್ ಇದೆಯಾ ಬೆಲೋ ಇದೆಯಾ? ಇದನ್ನು ಸ್ಪಷ್ಟೀಕರಿಸಬೇಕಾಗುತ್ತದೆ.

ಶ್ರೀ ಎ. ಕೃಷ್ಣಪ್ಪ: ಕಂಟ್ರಾಕ್ಟ್ ಟೆಂಡರ್ ಡೀಟೈಲ್ ನಾನು ತಂದಿಲ್ಲ. ಅವನ್ನು ಸಂಜೆ ಕೊಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಸಚಿವರು 2002-03ನೇ ಸಾಲಿನಲ್ಲಿ ರಾಜ್ಯದಲ್ಲಿ ವಸತಿ ನಿಲಯಗಳನ್ನು ಪ್ರಾರಂಭಿಸಿವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಮತ್ತು ಈಶಾನ್ಯ ವಲಯದಲ್ಲಿ ಏಳು ಜಿಲ್ಲೆಗಳು ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳು ಎಂದು ಅವುಗಳು ಮುಂದೆ ಬರತಕ್ಕಂಥ ಕಾರ್ಯಕ್ರಮವನ್ನು ರಾಜ್ಯಸರ್ಕಾರ ಹಾಕಿಕೊಂಡಿದೆ. ಆದರೆ ಇವತ್ತು ಅಲ್ಲಿ ಹತ್ತು ಲಕ್ಷ ಡ್ರಾಪ್ ಔಟ್ ಅದಂತಹ ಮಕ್ಕಳು ಸ್ಕೂಲಿಗೆ ಮರುಸೇರ್ಪಡೆ ಆಗಲೇಕಾದರೆ ಬಿಸಿ ಊಟದ ವಿಚಾರದಲ್ಲಿ 80 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಿದ್ದಾರೆ.ಅಲ್ಲಿ ಬಿಸಿ ಊಟಾನೋ ಇಲ್ಲ ತಂಗಳು ಊಟಾನೋ ಇಲ್ಲ ಅದು ರೋಗದ ಊಟವಾಗಿದೆ ಅದಕ್ಕೋಸ್ಕರ ಏಳು ಜಿಲ್ಲೆಗಳಲ್ಲಿ ಹೆಚ್ಚು ಹೆಚ್ಚು ಹಾಸ್ಟೆಲ್‌ಗಳನ್ನು ತೆರೆಯುವಂತಹ ವಿಚಾರವನ್ನು ತಾವು ಮಾಡಿದ್ದೀರಾ?

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಬಳ್ಳಾರಿ, ಬೀದರ್ ಹಾಗೂ ಬಾಗಲಕೋಟೆ, ಬಿಜಾಪುರ, ಗುಲ್ಬರ್ಗ ಕೊಪ್ಪಳ ಹಾಗೂ ರಾಯಚೂರು ಈ ಏಳು ಜಿಲ್ಲೆಗಳಲ್ಲಿ ಹೊಸದಾಗಿ ಹಾಸ್ಟೆಲ್ ಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಈ ಆರ್ಥಿಕ ವರ್ಷದಲ್ಲಿ ಹೊಸದಾಗಿ ಹಾಸ್ಟೆಲ್ ಮಾಡದೇ ಇದ್ದರೂ ಕೂಡ ಎಲ್ಲೆಲ್ಲಿ ಅಗತ್ಯವಿದೆ ಅಲ್ಲಿ ಸೀಟುಗಳನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಎಲ್ಲಾ ಸಹಕಾರವನ್ನೂ ಕೊಡುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ನಮ್ಮ 7 ಜಿಲ್ಲೆಗಳಲ್ಲಿ ಸುಮಾರು ಆರು ಲಕ್ಷ ಮಕ್ಕಳು ಸತ್ಯಾಲ್‌ನಿಂದ ಹೊರಗೆ ಇದ್ದಾರೆ. ಹಾಗಾಗಿ ಇದರ ಬಗ್ಗೆ ತಾವು ಚಿಂತನೆ ಮಾಡುತ್ತೀರಿ ಎಂದು ನಾನು ಭಾವಿಸುತ್ತೇನೆ.

ಶ್ರೀ ಎ. ಕೃಷ್ಣಪ್ಪ – ಈ ವಿಚಾರದಲ್ಲಿ ಹೇಳುವುದಾದರೆ ನಿಮಗೆ ನಾವು ಮೊದಲನೆಯ ಆದ್ಯತೆಯನ್ನು ಕೊಡುತ್ತೇವೆ. ಆದರೆ ಈ ವರ್ಷದಲ್ಲಿ ಮಕ್ಕಳಿಗೆ ತೊಂದರೆಯಾಗಿದೆ ಎಂದು ನನಗೆ ಪಟ್ಟಿ ಕೊಟ್ಟರೆ ಅಡಿಷನಲ್ ಸೀಟುಗಳನ್ನು ಜರೂರಾಗಿ ಮಾಡಿ ಕೊಡುತ್ತೇವೆ.

ಶ್ರೀ ಅಮರೇಗೌಡ ಬಯ್ಯಾಪುರ್ ಲಿಂಗನಗೌಡ:– ಮಾನ್ಯ ಅಧ್ಯಕ್ಷರೆ, ಹಾಸ್ಟೆಲ್‌ಗಳಲ್ಲಿ ಮಕ್ಕಳ ಸೀಟುಗಳನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದರು. ಸಮಾಜ ಕಲ್ಯಾಣ ಇಲಾಖೆ ಎಂದರೆ ಬರೀ ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳನ್ನು ಮಾತ್ರ ಜಾಸ್ತಿ ಮಾಡುತ್ತಿದ್ದಾರೆ. ಬಿಸಿಎಂ ಹಾಸ್ಟೆಲಗಳಲ್ಲೂ ಕೂಡ ಮಕ್ಕಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು.ಅಲ್ಲದೆ ನಮ್ಮ ಜಿಲ್ಲೆಯಲ್ಲಿ ನಾಲ್ಕು ವಸತಿ ನಿಲಯಗಳ ಕಟ್ಟಡಕ್ಕೆ ಅರ್ಥ ದುಡ್ಡನ್ನು ಒದಗಿಸಿ ಅದು ಒಂದೂವರೆ ವರ್ಷದಿಂದ ಅಪೂರ್ಣವಾಗಿ ಹಾಗೇ ನಿಂತಿದೆ. ಇನ್ನು ಒಂದು ವರ್ಷಕ್ಕೆ ಅವು ಎಲ್ಲೆ ಬಿದ್ದು ಹೋಗುತ್ತವೆಯೋ ಎನ್ನುವ ಆನಿಸಿಕೆ ಇದೆ. ಆದುದರಿಂದ ಆ ಕಟ್ಟಡಗಳನ್ನು ಪೂರ್ಣಗೊಳಿಸುವುದಕ್ಕೆ ಬೇಕಾದಂತಹ ಹಣವನ್ನು ಈ ಕೂಡಲೇ ಒದಗಿಸಿ ಈ ವರ್ಷವೇ ಅದನ್ನು ಪ್ರಾರಂಭ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ:– ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಹೇಳಿದ್ದಾರೆ ಒಂದು ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳಲ್ಲಿ ಮಾತ್ರ ಮಕ್ಕಳ ಸಂಖ್ಯೆ ಹೆಚ್ಚು ಮಾಡಿಕೊಡುವ ವಿಚಾರದ ಬಗ್ಗೆ ಹೇಳಿದರು. ಬ್ಯಾಕ್‌ವರ್ಡ್ ಕ್ಲಾಸ್ ಇರಬಹುದು, ಷೆಡ್ಯೂಲ್ ಕ್ಯಾಸ್ಟ್ ಇರಬಹುದು, ಮೈನಾರಿಟೀಸ್ ಇರಬಹುದು, ಅವುಗಳಲ್ಲಿ ಯಾವುದೇ ಪ್ರಾಬ್ಲಂ ಇದ್ದರೂ ಕೂಡ ಅದನ್ನು ನಮ್ಮ ಗಮನಕ್ಕೆ ತರಬಹುದು. ಸರ್ಕಾರಕ್ಕೆ ಎಲ್ಲಾ ವಿಚಾರ ಒಂದೇನೇ ಮಕ್ಕಳ ಸಂಖ್ಯೆಯನ್ನು ನಾಲ್ಕು ಹಾಸ್ಟೆಲ್‌ಗಳಲ್ಲಿ ಎಂದರೆ ಎಸ್‌ಸಿ:ಎಸ್‌ಟಿ ಹಾಗೂ ಬಿಸಿಎಂನಲ್ಲಿ ಕೂಡ ಜಾಸ್ತಿ ಮಾಡುತ್ತೇವೆ. ಇನ್ನು ಹಾಸ್ಟೆಲ್ ಕಟ್ಟಡಗಳು ಏನು ಇನ್‌ಕಂಪ್ಲೀಟ್ ಆಗಿದೆ. ಅದನ್ನು ಬೇಗ ಮುಗಿಸಬೇಕೆಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ.ಈ ವರ್ಷದಲ್ಲೆ ಅದನ್ನು ಮುಗಿಸುತ್ತೇನೆಂದು ನಾನು ಅವರಿಗೆ ಭರವಸೆ ಕೊಡುತ್ತೇನೆ.

**ಧಾರವಾಡ ಜಿಲ್ಲೆಯಲ್ಲಿರುವ ಗುಡಿ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳ ವಿವರಗಳು**

35(437): ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್(ಹುಬ್ಬಳ್ಳಿ):– ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಧಾರವಾಡ ಜಿಲ್ಲೆಯಲ್ಲಿ ಗುಡಿ ಕೈಗಾರಿಕೆ ಸಣ್ಣ ಕೈಗಾರಿಕೆಗಳು ಎಷ್ಟಿವೆ. ಎಷ್ಟು ಲಾಭದಲ್ಲಿರುತ್ತದೆ; ಎಷ್ಟು ಹಾನಿ ಅನುಭವಿಸುತ್ತಿರುತ್ತವೆ; ತಾಲ್ಲೂಕುವಾರು ವಿವರ ನೀಡುವುದು

ಆ. ಹಾನಿಗೊಳಪಟ್ಟಿರುವ ಗುಡಿ ಕೈಗಾರಿಕೆ ಸಣ್ಣ ಕೈಗಾರಿಕೆಗಳಿಗೆ ಸರಕಾರ ಧನ ಸಹಾಯ ನೀಡುವ ಹಂತದಲ್ಲಿದೆಯೇ;

ಇ. ಹಾನಿಗೊಳಪಟ್ಟ ಗಡಿ ಕೈಗಾರಿಕೆ,ಸಣ್ಣ ಕೈಗಾರಿಕೆಗಳಿಗೆ ಆರ್ಥಿಕ ಸಹಾಯ ನೀಡುವುದರಿಂದ ಸರ್ಕಾರಕ್ಕೆ ಎಷ್ಟು ಆರ್ಥಿಕ ಹೊರೆಯಾಗುತ್ತಿದೆ?